DFA/2890674

# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 309

ಸದಸ್ಯರ ಹೆಸರು : ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ಸಚಿವರು : ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ :19.08.2026

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | 2025-26ನೇ ಸಾಲಿನಲ್ಲಿ ತಿಳಿಸಿದಂತೆ ಟೆಂಡರ್ ಹಂತದಲ್ಲಿರುವ 400 ಬಸ್‌ಗಳ ಖರೀದಿಗೆ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಯಿಂದ ಈವರೆಗೆ ಅನುದಾನ ನೀಡದಿರುವುದು ನಿಜವೇ; ಈ ಪ್ರಕ್ರಿಯೆ ಯಾವ ಹಂತದಲ್ಲಿದೆ: (ಮಾಹಿತಿ ಒದಗಿಸುವುದು) | 2025-26ನೇ ಸಾಲಿನ ಆಯವ್ಯಯ ಕಂಡಿಕೆ 469 (iii)ರಲ್ಲಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಕ್ಕೆ ಹಂಚಿಕೆಯಾದ 400 ಬಸ್ಸುಗಳನ್ನು ಅಂದಾಜು ವೆಚ್ಚ ಒಟ್ಟು ರೂ.152.00 ಕೋಟಿಗಳಲ್ಲಿ ಖರೀದಿಸಲು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ ಒದಗಿಸಿರುವ ರೂ.45.00 ಕೋಟಿಗಳನ್ನು ಉಪಯೋಗಿಸಿಕೊಂಡು ಪ್ರತಿ ಬಸ್ ಗೆ ರೂ.38.00 ಲಕ್ಷಗಳಂತೆ ಒಟ್ಟು 119 ಬಸ್ಗಳನ್ನು, 2026-27ನೇ ಸಾಲಿನ ಪೂರಕ ಅಂದಾಜು-1ರಲ್ಲಿ ರಾಜ್ಯ ಸರ್ಕಾರದಿಂದ ಒದಗಿಸಲಾಗುವ ರೂ.76.00 ಕೋಟಿಗಳಿಂದ 200 ಬಸ್ಸುಗಳನ್ನು ಹಾಗೂ ಉಳಿದ 81 ಬಸ್ ಗಳನ್ನು ಖರೀದಿಸಲು ತಗಲುವ ಅಂದಾಜು ಮೊತ್ತ ರೂ.30.78 ಕೋಟಿಗಳನ್ನು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಿಂದಲೇ (KKRDB) ಪಡೆದು ಖರೀದಿಸಲು ಆಡಳಿತಾತ್ಮಕ ಅನುಮೋದನೆ ನೀಡುವ ಪ್ರಸ್ತಾವನೆಗೆ ದಿನಾಂಕ:13.08.2026ರಂದು ನಡೆದ ಸಚಿವ ಸಂಪುಟವು ಅನುಮೋದಿಸಿದ್ದು, ಆದರಂತೆ, ನಿಯಮಾನುಸಾರ ಟೆಂಡರ್ ಕರೆದು ಬಸ್ಸುಗಳ ಖರೀದಿಸಲು ಕ್ರಮಕೈಗೊಂಡು ಬಳ್ಳಾರಿ ಹಾಗೂ ವಿಜಯನಗರ ವಿಭಾಗಗಳಿಗೆ ತಲಾ 35 ರಿಂದ 40 ಬಸ್ಸುಗಳನ್ನು ವಿಭಾಗದ ಅಗತ್ಯತನುಗುಣವಾಗಿ ಹಂಚಿಕೆ ಮಾಡಲು ಆದ್ಯತೆಯ ಮೇರೆಗೆ ಕ್ರಮವಹಿಸಲಾಗುವುದು. |
| ಆ | ಅನುದಾನ ನೀಡಿದ್ದಲ್ಲಿ ಖರೀದಿಸಲಾಗುತ್ತಿರುವ 400 ಬಸ್‌ಗಳ ಪೈಕಿ ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಿಗೆ ಎಷ್ಟು ವಿವಿಧ ಮಾದರಿಯ ಬಸ್‌ಗಳನ್ನು ಒದಗಿಸಲಾಗುವುದು; | |
| ಇ. | ಇಲ್ಲದಿದ್ದಲ್ಲಿ, ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಯಿಂದ ಅನುದಾನ ನೀಡದಿರಲು ಕಾರಣವೇನು: ಅನುದಾನ ಬಿಡುಗಡೆ ಮಾಡಲು ಯಾವ ಕಾಲಮಿತಿಯಲ್ಲಿ, ಯಾವ ಕ್ರಮ ಜರುಗಿಸಲಾಗುವುದು? (ಸಂಪೂರ್ಣ ಮಾಹಿತಿ ಒದಗಿಸುವುದು) | |

ಸಂಖ್ಯೆ: ಟಿಡಿ 212 ಟಿಸಿಕ್ಯೂ 2026

(ಬಿ.ಎಸ್. ಸುರೇಶ)
ಸಾರಿಗೆ ಸಚಿವರು



File No. TD/212/TCQ/2026-Sec 1-Trans (Computer No. 2265113)